ಸಂತೋಷ. ಒಂದು ಸಾರಿ ಕರೆದ ಮೇಲೆ, ಅವರು ಇಲ್ಲದಿದ್ದರೆ ಯಾರಿಗೂ ಅವಕಾಶ ಕೊಡಬಾರದು. ಹಿಂದೆ ಒಂದು ಸಾರಿ ಕರೆದಾಗ ಸದಸ್ಯರು ಇಲ್ಲದಿದ್ದರೆ ಇನ್ನೊಂದು ಸಾರಿ ಹೆಸರು ಕರೆಯುತ್ತಿದ್ರಿ.

ಅಧ್ಯಕ್ಷರು: ಪ್ರಶ್ನೋತ್ತರ ವೇಳೆ ಒಂದು ಗಂಟೆ ಮುಗಿದು ಹೋಗಿದೆ.

ಶ್ರೀ ಬಿ.ಸೋಮಶೇಖರ್: 5- 10 ನಿಮಿಷ ಅವಕಾಶ ಮಾಡಿಕೊಡಿ.

ಅಧ್ಯಕ್ಷರು: ನಿಮ್ಮ ಪ್ರಶ್ನೆ ಲ್ಯಾಪ್ಸ್ ಆಗುವುದಿಲ್ಲ ಅದನ್ನು ಇನ್ನೊಂದು ದಿವಸ ನಾನು ತೆಗೆದುಕೊಳ್ಳುತ್ತೇನೆ.

ಶ್ರೀ ಬಿ.ಸೋಮಶೇಖರ್: ಇನ್ನು ಮುಂದೆ, ಒಂದು ಸಾರಿ ಹೆಸರು ಕರೆದಾಗ ಸದಸ್ಯರು ಇಲ್ಲದಿದ್ದರೆ ಇನ್ನೊಂದು ಸಾರಿ.....

ಅಧ್ಯಕ್ಷರು: ಸಭೆ 10.15ಕ್ಕೆ ಶುರುವಾಯಿತು, ಈಗ 11.15 ಆಗಿದೆ. ಮೂರು ದಿವಸಗಳಿಂದ ಒಂದು ಗಂಟೆ ಮಾತ್ರ ಪ್ರಶ್ನೋತ್ತರ ವೇಳೆಗೆ ಅವಕಾಶ ಕೊಡಲಾಗುತ್ತಿದೆ.

ಶ್ರೀ ಬಿ.ಸೋಮಶೇಖರ್: ಇಷ್ಟು ಶಿಸ್ತಿನಲ್ಲಿ ನಡೆಯುವುದಾದರೆ ಸಂತೋಷ.

ಶ್ರೀ ಉಮೇಶ್ ವಿ.ಕತ್ತಿ: ನಾನು ಸಹ ಇನ್‌ಟೈಮ್‌ಗೆ ಬಂದಿದ್ದೇನೆ. ಪ್ರಶ್ನೆ ಲ್ಯಾಪ್ಸ್ ಆಗುವುದಿಲ್ಲವೆಂದು ಹೇಳುತ್ತೀರಿ, ಯಾವಾಗ ತೆಗೆದುಕೊಳ್ಳುತ್ತೀರಿ?

ಅಧ್ಯಕ್ಷರು: ಮುಂದಿನ ಗುರುವಾರ ತೆಗೆದುಕೊಳ್ಳುತ್ತೇನೆ. ಈಗ ಸಮಯ ಇಲ್ಲದಿರುವುದರಿಂದ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ನಿಮ್ಮ ಪ್ರಶ್ನೆಗಳು ಲ್ಯಾಪ್ಸ್ ಆಗದ ಹಾಗೆ ನಾನು ನೋಡಿಕೊಳ್ಳುತ್ತೇನೆ.

ಶ್ರೀ ಬಿ.ಶಿವರಾಂ: ನನ್ನ ಹೆಲ್ಡ್‌ಓವರ್ ಪ್ರಶ್ನೆ ಏನಾಯಿತು?

ಅಧ್ಯಕ್ಷರು: ನಿಮ್ಮ ಪ್ರಶ್ನೆಗೆ ಉತ್ತರ ಬಂದಿದೆ, ಟೈಮ್ ಇಲ್ಲದಿರುವುದರಿಂದ ಹೆಲ್ಡ್‌ಓವರ್ ಆಗಿದೆ ಅದು ಲ್ಯಾಪ್ಸ್ ಆಗುವುದಿಲ್ಲ.

ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ(ಗೃಹ ಸಚಿವರು): ಮಾನ್ಯ ಅಧ್ಯಕ್ಷರೇ, 22ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಲ್ಲಿ ಒಟ್ಟು 52 ಪ್ರಶ್ನೆಗಳ ಪೈಕಿ 40 ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.